ಶ್ರೀ ಕಾಗೋಡು ತಿಮ್ಮಪ್ಪ :—ಸಲಹಾ ಸಮಿತಿಯನ್ನು ರಚನೆ ಮಾಡುವುದು ಅವಶ್ಯಕ ಎಂಬುದು ಕನ್‌ವಿನ್ಸ್ ಆದರೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ : —ಕನ್‌ವಿನ್ಸ್ ಆದರೆ ಮಾಡುತ್ತೇವೆ.

1-30 P.M.

NEW UNIVERSITIES IN THE STATE

177. SRI S. M. SHEERNALY CHANDRASEKAR (Hosanagar).—

Will the Minister for Education be pleased to state:—

(*a*) whether the Government is aware of the assurance given by the then Minister for Education to start three more Universities in Karnataka State ;

(*b*) whether the Government is aware of the assurance given by the then Minister for Education to members to locate a University at Shimoga ;

(*c*) whether it is a fact that the Government has dropped the proposal of starting any more Universities in the State ;

(*d*) if so, the reasons for the same ?

SRI M. MALLIKARJUNASWAMY :—(Minister for Education)

(*a*) The assurance with reference to the question of starting two more Universities in the State was that the matter will be examined.

(*b*) No

(*c*) Yes

(*d*) Due to financial stringency

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಸ್ವಾಮಿ ತಾವು ಈ ಹಿಂದೆ ಸರ್ಕಾರ 3 ಕ್ಕಿಂತ ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ಮಾಡತಕ್ಕಂಥಾ ಯೋಚನೆ ಇಲ್ಲ ಎಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದೀರಿ. ಆದರೆ ಹಿಂದೆ ವಿದ್ಯಾ ಮಂತ್ರಿಗಳಾಗಿದ್ದವರು ನಮ್ಮ ರಾಜ್ಯದಲ್ಲಿ 3 ವಿಶ್ವವಿದ್ಯಾನಿಲಯಗಳನ್ನು ತೆರೆಯುತ್ತೇವೆ ಎಂದು ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದರು. ಹೀಗಿರುವಾಗ ಈಗಿನ ಮಾನ್ಯ ವಿದ್ಯಾ ಮಂತ್ರಿಗಳ ಹೇಳಿಕೆ ಹಕ್ಕುಬಾಧ್ಯತೆಗಳಿಗೆ ಚ್ಯುತಿ ತರುವುದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಮಾನ್ಯ ಸದಸ್ಯರು ಹೇಳಿದಂತಹ ಹೇಳಿಕೆಯನ್ನು ಹಿಂದೆ ಇದ್ದಂತಹ ಮಾನ್ಯ ವಿದ್ಯಾ ಸಚಿವರು ಈ ಸಭೆಯಲ್ಲಿ ಮಾಡಿಲ್ಲ. ಬಹುಶಃ ಅವರೇನಾದರೂ ಆ ರೀತಿ ಹೇಳಿದ್ದರೆ ಗಜೇಂದ್ರಗಡ್ಕರ್ ಅವರ ವರದಿಯ ಪ್ರಕಾರ 30 ಕಾಲೇಜುಗಳಿಗೆ ಒಂದು ಯೂನಿವರ್ಸಿಟಿ ಇರಬಹುದು, ಅಥವಾ ಯಾವುದೇ ಕಾರಣಗಳಿಂದ ಒಂದು ಯೂನಿವರ್ಸಿಟಿಗೆ 60 ಕಾಲೇಜುಗಳು ಇರಬಹುದು ಎಂದು ಹೇಳಿದ್ದಾರೆ; ಆ ದೃಷ್ಟಿಯಲ್ಲಿ ನಮ್ಮ ಕರ್ನಾಟಕ ಯೂನಿವರ್ಸಿಟಿ ಹಾಗೂ ಮೈಸೂರು ಯೂನಿವರ್ಸಿಟಿಯಲ್ಲಿ 100 ಕ್ಕಿಂತ ಹೆಚ್ಚು ಕಾಲೇಜುಗಳು ಇರುವುದರಿಂದ ಗಜೇಂದ್ರಗಡ್ಕರ್ ಅವರ ವರದಿಯ ಪ್ರಕಾರ ಇನ್ನು ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ತೆರೆಯುವುದಕ್ಕೆ ಅವಕಾಶ ಇದೆ ಎಂದು ಹಿಂದಿನ ಮಾನ್ಯ ವಿದ್ಯಾ ಮಂತ್ರಿಗಳು ಹೇಳಿರಬಹುದು.

ಶ್ರೀ ಎಸ್. ಎಂ. ಶೀರನ್ನಾಳಿ ಚಂದ್ರಶೇಖರ್ :—ಸ್ವಾಮಿ ತಾವು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ, ಆ ಮೇಲೆ (ಆ) ಪ್ರಶ್ನೆಗೆ ಉತ್ತರವಾಗಿ ನಿಜ ಎಂದು ಹೇಳಿದ್ದೀರಿ. ಈ ರೀತಿ ಉತ್ತರವನ್ನು ಹೇಳಿರುವುದು ಒಂದಕ್ಕೊಂದಕ್ಕೆ ದ್ವಂದ್ವವಾಗುವುದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ :—ಮಾನ್ಯ ಸದಸ್ಯರು ಪ್ರಶ್ನೆ ಮತ್ತು ಉತ್ತರವನ್ನು ಸ್ವಲ್ಪ ಓದಿ ಅರ್ಥ ಮಾಡಿಕೊಳ್ಳಬೇಕು. ಹಿಂದೆ ಶಿಕ್ಷಣ ಮಂತ್ರಿಗಳಾಗಿದ್ದವರು ಒಂದು ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗದಲ್ಲಿ ಸ್ಥಾಪಿಸುವುದಾಗಿ ಸದಸ್ಯರಿಗೆ ಭರವಸೆ ನೀಡಿರುವುದು ಸರ್ಕಾರದವರಿಗೆ ಗೊತ್ತಿದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೇವೆ.

ಶ್ರೀ ಎ. ಆರ್. ಬದರೀನಾರಾಯಣ್ :....ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿನವರು ನೀವೇ ಪಂಚವಾರ್ಷಿಕ ಯೋಜನೆಯಲ್ಲಿ 20 ಕ್ಕಿಂತ ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಯೂನಿವರ್ಸಿಟಿಗಳನ್ನು ಸ್ಥಾಪನೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಹಿಂದೆ ಇದ್ದ ಮೂನ್ಯ ವಿದ್ಯಾ ಸಚಿವರು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನವರಿಗೆ ಒಂದು ಪತ್ರ ಬರೆದು ಗಜೇಂದ್ರ ಗಡ್ಕರ್ ಅವರ ವರದಿಯ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿ ೩ ವಿಶ್ವ ವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಇದೆ ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು ಕೇಳಿದ್ದರು. ಆ ಬಗ್ಗೆ ಹಿಂದೆ ಇದ್ದ ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನ ಅಧ್ಯಕ್ಷರಿಂದ ಯಾವ ಉತ್ತರವೂ ಬಂದಿಲ್ಲ. ಈಗ ಹೊಸಬರು ಬಂದಿದ್ದಾರೆ. ಅವರ ಹೆಸರು ಶ್ರೀ ಜಾಕೂಬ್ ಎಂದು. ಅವರು ೬ ನೇ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ವಿಶ್ವ ವಿದ್ಯಾನಿಲಯಗಳನ್ನೂ ಕೊಡುವುದಕ್ಕಾಗುವುದಿಲ್ಲ ಆದರೆ "we will have to think in terms of consolidation, not further expansion of Universities" ಎಂದು ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ :....ಅವರು ಏನಾದರೂ ತಮಗೆ ಪತ್ರ ಬರೆದಿದ್ದಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಪತ್ರ ಬರೆದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನ ಅಧ್ಯಕ್ಷರು ನಮ್ಮ ರಾಜ್ಯಕ್ಕೆ ಯೂನಿವರ್ಸಿಟಿಯನ್ನು ಕೊಡುತ್ತೇವೆ ಎಂದು ನನ್ನ ಹತ್ತಿರ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಆ ರೀತಿ ಅವರು ನಮಗೆ ಪತ್ರ ವೇನೂ ಬರೆದಿಲ್ಲ. ಹಿಂದೆ ಇದ್ದ ಮೂನ್ಯ ವಿದ್ಯಾ ಸಚಿವರು ಮೂರು ವಿಶ್ವ ವಿದ್ಯಾ ನಿಲಯಗಳ ಉಪಕುಲಪತಿಗಳು ಮತ್ತು ಕುಲಪತಿಗಳು ಸದಸ್ಯರಾಗಿಯೂ ಮತ್ತು ಸರ್ಕಾರದ ಫೈನಾನ್ಸ್ ಕಮಿಷನರ್, ಡೆವಲಪ್‌ಮೆಂಟ್ ಕಮಿಷನರ್ ಇರತಕ್ಕಂಥ ಒಂದು ಸಮಿತಿಯನ್ನು ಮಾಡಿ ಅದಕ್ಕೆ ಮೂನ್ಯ ವಿದ್ಯಾ ಸಚಿವರು ಅಧ್ಯಕ್ಷರಾಗಿದ್ದರು. ಆ ಸಮಿತಿಯವರು ಗಜೇಂದ್ರಗಡ್ಕರ್ ಅವರ ವರದಿಯ ಪ್ರಕಾರ ನಮ್ಮ ರಾಜ್ಯದಲ್ಲಿ ೩ ವಿಶ್ವ ವಿದ್ಯಾನಿಲಯಗಳನ್ನು ಮಾಡುವುದಕ್ಕೆ ಅವಕಾಶ ಇದೆ ಎಂದು ಅವರು ವರದಿಯನ್ನು ಕೊಟ್ಟಿದ್ದಾರೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಿ ಈಗ ನಮ್ಮ ರಾಜ್ಯದಲ್ಲಿ ವಿಶ್ವ ವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಇದ್ದರೂ ಕೂಡ ಈಗ ಸದ್ಯಕ್ಕೆ ಹಣಕಾಸಿನ ಪರಿಸ್ಥಿತಿ ಸರಿ ಇಲ್ಲದೇ ಇರುವುದರಿಂದ ಇದನ್ನು ಸದ್ಯಕ್ಕೆ ಮುಂದಕ್ಕೆ ಹಾಕೋಣ ಎಂದು ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ.– ಒಂದು ಕಡೆ ಸರ್ಕಾರದವರು ವಿಶ್ವ ವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ ಇನ್ನೊಂದು ಕಡೆ ಹಣಕಾಸಿನ ಮುಗ್ಗಟ್ಟು ಇರುವುದರಿಂದ ಅದು ತಾತ್ಕಾಲಿಕವಾಗಿ ಆಗುವುದಿಲ್ಲ ಎಂದು ಹೇಳಿದ್ದಾರೆ. ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣದ ಮುಗ್ಗಟ್ಟು ಸರಿಹೋದಾಗ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡತಕ್ಕಂಥ ಯೋಚನೆ ಮಾಡುತ್ತೀರಾ?

ಶ್ರೀ. ಎಂ. ಮಲ್ಲಿಕಾರ್ಜುನಸ್ವಾಮಿ : ಮುಂದಿನ ಪ್ರಶ್ನೆಯನ್ನು ಆ ಮೇಲೆ ಮಾತನಾಡೋಣ ನಾನು ಮೊನ್ನೆ ದೆಹಲಿಗೆ ಹೋದಾಗ ನನ್ನ ಜೊತೆಯಲ್ಲಿ ಶ್ರೀಮಾನ್ ಕೋಣಂದೂರು ಲಿಂಗಪ್ಪನವರೂ ಇದ್ದರು. ಅಲ್ಲಿ ಯೂನಿವರ್ಸಿಟಿ ಗ್ರಾಂಟು ಕಮಿಷನ್ನಿನವರು ನಾಗಪುರ ಯೂನಿವರ್ಸಿಟಿಯಲ್ಲಿ ವೈಸ್‌ಛಾನ್ಸಲರ್ ಜೊತೆಯಲ್ಲಿ 9 ಜನ ಡೀನ್ ಅಫ್ಯಾಕಲ್ಟೀಸ್ ಆವರ ಜೊತೆಯಲ್ಲಿ 26 ಜನ ಸ್ನಾತಕೋತ್ತರ ಭಾಗದ ಅಧ್ಯಾಪಕರ ಜೊತೆಯಲ್ಲಿ ಈ ಒಂದು ಪ್ರಶ್ನೆಯನ್ನು ಮಾತನಾಡತಕ್ಕಂಥಾ ಸಂದರ್ಭದಲ್ಲಿ ಕೂಡ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಕನ್ಸಾಲಿಡೇಷನ್ನು ಮಾಡಬೇಕೇ ಹೊರತು ಬೇರೆ ಯೂನಿವರ್ಸಿಟಿಯನ್ನು ಮಾಡತಕ್ಕಂಥಾದ್ದು ಸರಿಯಲ್ಲ ಎಂದು ಯೂನಿವರ್ಸಿಟಿ ಗ್ರಾಂಟ್ ಕಮಿಷನ್ನಿನ ಅಧ್ಯಕ್ಷರಾದ ಜಾಕೂಬ್‌ರವರು ಹೇಳಿದ್ದಾರೆ.

ಶ್ರೀ. ಕಾಗೋಡು ತಿಮ್ಮಪ್ಪ.– ಕನ್‌ಸಾಲಿಡೇಷನ್ನು ಮಾಡತಕ್ಕಂಥ ಪ್ರಶ್ನೆ ಇದೆಯೇ ಹೊರತು ಫರ್ದರ್ ಎಕ್ಸ್‌ಪ್ಯಾನನ್ನು ಮಾಡತಕ್ಕ ಪ್ರಶ್ನೆಯೇ ಇಲ್ಲ ಎಂದು ಯೂನಿವರ್ಸಿಟಿ ಗ್ರಾಂಟು ಕಮಿಷನ್ನಿನವರು ಹೇಳಿದ್ದಾರೆ ಎಂದು ಮಾನ್ಯ ವಿದ್ಯಾಸಚಿವರು ಹೇಳಿದರು. ಹಾಗಾದರೆ ಈಗ ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗತಕ್ಕ ಆರೋಗ್ಯ ವಿಶ್ವವಿದ್ಯಾನಿಲಯ ಮತ್ತು ಕೃಷಿ ವಿಶ್ವವಿದ್ಯಾನಿಲಯಗಳಿಗೂ ಇದು ಅನ್ವಯವಾಗುತ್ತದೆಯೇ?

ಶ್ರೀ. ಎಂ. ಮಲ್ಲಿಕಾರ್ಜುನಸ್ವಾಮಿ.....ಇದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಬೇಕು.

ಶ್ರೀ. ಡಿ. ದೇವರಾಜ ಅರಸ್.– ಎಜುಕೇಷನನ್ನಿಗೆ ಸಂಬಂಧಪಟ್ಟ ಹಾಗೆ ವೆಡಿಕಲ್ ಯೂನಿವರ್ಸಿಟಿ ಅಗ್ರಿಕಲ್ಚರಲ್ ಯೂನಿವರ್ಸಿಟಿ ಅವರಿಗೆ ಬರು ದಿಲ್ಲ. ಅವರಿಗೆ ಇರತಕ್ಕಂಥಾದ್ದು ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜುಗಳು.

SRI A. R. BADARINARAYANA.--My question has not been answered. My question is whether the University Grants Commission has under its Five Year Plan the

sanction of more than 5 Universities for the entire country, is it or is it not so ?

SRI M. MALLIKARJUNASWAMY.—That has not come to the knowledge of the Government. Just now the hon. member has brought it to my notice and I will let him know.

CASES PENDING WITH SUB-DIVISIONAL MAGISTRATE, BIJAPUR.

180. SRI J. L. KABADE (Ballolli).—Will the Chief Minister be pleased to state.—

(*a*) the number of cases under Sections 107, 109, 110, 111 and 112 of IPC pending with Sub-Divisional Magistrate (Assistant Commissioner) Bijapur since three years i.e., from 1970 to 1973 June 30th (give details) ;

(*b*) whether it is a fact that the Sub-Divisional Magistrate, Bijapur had heard many of the cases and not given judgement even though more than a year has lapsed ;

(*c*) if so, the number of cases in which he has not given judgement after hearing both the parties and nature of such cases ;

(*d*) the action Government proposes to take against the concerned officers ?

SRI D. DEVARAJ URS (Chief Minister).—

(*a*) No cases under I. P. C. are pending with the Sub-Divisional Magistrate, Bijapur.

(*b*) to (*d*) Does not arise in view of reply to clause (a) above.